MADAM SPEAKER.—Question No. 86, 189 and 282 are held over. Now Questions are over.

CALLING ATTENTION TO THE MATTER OF URGENT PUBLIC IMPORTANCE

(i re —non implementation of Pai Pay Commission recommendations in respect of the Local Bodies employees.

SRI B. V. KAKKILAYA (Bantwal):—I call the attention of the Hon Minister for Municipal Administration and Political Pensions to the non-implementation of the recommendations of Pai Pay Commission in respect of the employees of the Local Bodies.

SRI D. K. NAIKAR (Minister for Municipal Administration and Political Pensions).—I with to make the following statement —

The Pai Pay Commission was constituted by Government in Govt Order No. FD 4 SRP (3) 74, dated 13th August 1974 to give its recommendation with regard to the revision of pay structure of Government staff as well as the employees of the local bodies.

In chapter 20 of its report, the Pay Commission recommended that the staff of the local bodies might be placed on the same scales of pay as those recommended in respect of comparable categories of Government staff.

In order to consider the recommendations of the Pay Commission, an Official Pay Committee was constituted under Govt. order No. FD 20 SRP (3) 76. dated 13th July 1976. On the basis of the recommendation of the Official Pay Committee, Government revised the pay scales of the Government employees with effect from 1st January 1977 As recommendations of the Official Pay Committee did not apply to the cases of the employees of the local bodies, the Government, in their order No. HMA 1173 MLR 76, dated 26th February 1977, constituted a separate Official Committee to make suitable recommendations on the representations of the employees of the local bodies regarding revision of pay scales and payment of T.A, and C. A. etc.

This Committee has given its interim report and recommendations made by this Committee are under the active consideration of the Government. A decision in this regard will be taken early.

ಶ್ರಿ ಬಿ. ವಿ. ಕಕ್ಕಿಲಾಯ.—ಬಹಳ ಕಡಿಮೆ ಸಂಬಳ ಬರುವವರು ಇಲ್ಲಿ ಜಾಸ್ತಿ ಇದ್ದಾರೆ ನಾನು ತಮಗೆ ಎರಡು ಪೂರಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ತಾವು ಏನು ಒಂದು ಆಫೀಸಿಯರ್ ಕಮಿಟಿ ಮಾಡಿದ್ದಿರಿ ಅದು ಒಂದೆ ಇಂಟರೀಮ್ ರಿಪೋರ್ಟು ಕೊಟ್ಟು 1976 ರಿಂದ ಇಂಟರೀಮ್ ರಿಲೀಫ್ ಕೊಡಬೆಕೆಂದು ಹೇಳಿದ ಪ್ರಕಾರ ಬೇರೆ ಎಲ್ಲ ಕಡೆಯಲ್ಲೂ ಕೊಟ್ಟಿದ್ದಾರೆ ಆದರೆ ಯಾರು ಮುನಿಸಿಪಲ್ ಎಂಪ್ಲಾಯೀಸ್ ಇದ್ದಾರೆ ಅವರಿಗೆ ಕೊಟ್ಟಿಲ್ಲ. ಅದೇ ರೀತಿ 1—1—1977ರಿಂದ ಸರ್ಕಾರಿ ಆಜ್ಞೆ ಪ್ರಕಾರ ಬೇರೆಯವರಿಗೆಲ್ಲಾ ಹೊಸ ಸ್ಕೇಲ್ ಆಫ್ ಪೇ ಕೊಟ್ಟಿದ್ದೀರಿ ಇವರಿಗೆ ಮಾತ್ರ

ಇಲ್ಲಿಯವರೆಗೆ ಕೊಟ್ಟಿಲ್ಲ. ಅಫಿಷಿಯರ್ ಹೇ ಕಮಿಟಿ ಏನು ಮಾಡಿದ್ದಿರಿ ಆಗಲೇ ಅವರ ಜೊತೆಯಲ್ಲೇ ಇವರನ್ನು ಸೇರಿಸಬಹುದಿತ್ತಲ್ಲ? ಹಾಗೆ ಏತಕ್ಕೆ ಮಾಡಲಿಲ್ಲ? ಈಗ ಒಂದು ಕಮಿಟಿ ಮಾಡಿದ್ದೀರಿ ಆ ಕಮಿಟಿಯವರು ಇಂಟರೀಮ್ ರಿಪೋರ್ಟು ಕೊಟ್ಟಿದ್ದಾರೆ ಅವರು ಫೈನಲ್ ರಿಪೋರ್ಟು ಕೊಡುವ ತನಕ ಇಂಟರೀಮ್ ರಿಲೀಫ್‌ನ್ನು ಅವರಿಗೆ ಕೊಡಲು ತಡಮಾಡಬೇಡಿ. ಬಡ ನೌಕರರಿಗೆ ಈ ರೀತಿ ತೊಂದರೆ ಕೊಡುವುದನ್ನು ತಪ್ಪಿಸುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡು ಕೂಡಲೇ ಏನಾದರೂ ವ್ಯವಸ್ಥೆ ಮಾಡುತ್ತೀರಾ? ಅದನ್ನು ದಯವಿಟ್ಟು ತಿಳಿಸಿ? ಅನೇಕ ಸಾರಿ ಆ ಬಡ ನೌಕರರು ತಮ್ಮ ಮುಂದೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳನ್ನು ಕಂಡು ಅವರ ಕಷ್ಟಗಳನ್ನು ಹೇಳಿದ್ದಾರೆ. ಅವರ ಪ್ರತಿನಿಧಿಗಳು ಸಹಿತ ತಮ್ಮನ್ನು ಭೇಟಿಮಾಡಿ ತಮ್ಮ ಗಮನಕ್ಕೆ ಈ ವಿಷಯಗಳನ್ನು ತಂದಿದ್ದಾರೆ. ಇದು ಇನ್ನು ಎಷ್ಟು ಕಾಲ ತೆಗೆದುಕೊಳ್ಳುತ್ತದೆ ಅಥವಾ ಕೂಡಲೇ ಅವರಿಗೆ ಈ ಸೌಲಭ್ಯ ಕೊಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಡಿ. ಕೆ. ನಾಯಕರ್ (ಪೌರಾಡಳಿತ ಸಚಿವರು).—ಸರ್ಕಾರದ ಉದ್ದೇಶ ಏನು ಇದೆ ಎನ್ನುವುದನ್ನು ತಿಳಿಸಿದ್ದೇನೆ ಹೇ ಕಮಿಷನ್ ರಿಪೋರ್ಟ್ ಪ್ರಕಾರ ಇದರ ಲಾಭವನ್ನು ಲೋಕಲ್ ಆಥಾರಿಟೀಸ್‌ಗೆ ಸೇರಿದ ನೌಕರರಿಗೂ ಆಳವಡಿಸಬೇಕೆನ್ನುವುದೇ ಸರ್ಕಾರದ ಆಶಯ. ಆದರೆ ಸರ್ಕಾರಿ ನೌಕರರಿಗೆ ಕೊಟ್ಟಕೂಡಲೇ ಇವರಿಗೂ ಕೂಡ ಆಫಿಷಿಯರ್ ಕಮಿಟಿ ಕಾನ್ಸ್‌ಟಿಟ್ಯೂಟ್ ಮಾಡಿದ್ದೇವೆ ಜೊತೆಗೆ ಎರಡು ತಿಂಗಳೊಳಗೆ ವರದಿಯನ್ನು ಕೊಡಬೇಕೆಂದು ಹೇಳಿದ್ದೇವೆ ಅವರು ಕೊಟ್ಟಿರುವ ಇಂಟರೀಮ್ ರಿಪೋರ್ಟಿನ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ವಿಚಾರಮಾಡಿ ಯೋಗ್ಯ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಇದ್ದೇವೆ. ಅದನ್ನು ಈ ಹಂತದಲ್ಲಿ ಹೇಳಲಿಕ್ಕೆ ಬರುವುದಿಲ್ಲ ಸರ್ಕಾರದ ಧೋರಣೆ ಅವರಿಗೂ ಈ ಸೌಲಭ್ಯ ಕೊಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೇವೆ. ತೀರ್ಮಾನವಾಗಿ ಜಾರಿಗೆ ಬರುತ್ತದೆ.

ಶ್ರೀ ವಿ. ಎನ್. ಪಾಟೀಲ್.—ಅಂತಿಮ ವರದಿ ಬರುವವರೆಗೆ ಇಂಟರೀಮ್ ರಿಲೀಫ್ ಕೊಡುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್.—ಇಂಟರೀಮ್ ರಿಲೀಫ್ ಕೊಡಬೇಕೆಂದು ಸರ್ಕಾರದ ಗಮನದಲ್ಲಿದೆ ಕೊಡಬಾರದು ಎಂದು ನಮ್ಮ ಉದ್ದೇಶವಲ್ಲ ಆದರೆ ಅದನ್ನು ಕೊಡಬೇಕೆಂದು ತೀರ್ಮಾನವಾದ ಮೇಲೆ ಏಷ್ಟು ಕೊಡಬೇಕು ಏಲ್ಲಿಂದ ಕೊಡಬೇಕು ಏನ್ನುವುದು ಇದು ಮುಖ್ಯವಾದ ಪ್ರಶ್ನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಎಲ್ಲರಿಗೂ ಕೊಟ್ಟಹಾಗೆ ಇವರಿಗೂ ಕೊಡಬೇಕು.

ಶ್ರೀ ಡಿ. ಕೆ. ನಾಯ್ಕರ್.—ಮ್ಯುನಿಸಿಪರ್ ಸಂಸ್ಥೆಗಳ ಆದಾಯವನ್ನು, ಅವರ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು, ಅದನ್ನು ನೋಡಿ ಮಾಡಬೇಕಾಗುತ್ತದೆ.

Strike by Students of various Engineering Colleges in the State

ಶ್ರೀ ಕೆ.ಎಚ್. ಹನುಮೇಗೌಡ (ಹಾಸನ) ಮಾನ್ಯ ಸಭಾದ್ಯಕ್ಷಣೀಯರೆ, ನಾನು ಒಂದು ಕಾಲಿಂಗ್ ನೋಟಿನನ್ನು ಕಳುಹಿಸಿದ್ದೆ. ನಮ್ಮ ಹಾಸನದಲ್ಲಿ ಇಂಜನೀಯರಿಂಗ್ ಕಾಲೇಜ್ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆ, ಉಪವಾಸ ಸತ್ಯಾಗ್ರಹವನ್ನು ಬ್ಯಾಚ್ ಬೈ ಬ್ಯಾಚ್ ಪ್ರಾರಂಭ ಮಾಡಿದ್ದಾರೆ. ಅವರು ಯೂನಿವರ್ಸಿಟಿಯವರಲ್ಲಿ ಕೆಲವು ಡಿಮಾಂಡ್‌ಗಳನ್ನು ಇಟ್ಟಿದ್ದಾರೆ. ದಯಮಾಡಿ ಸರ್ಕಾರದವರು ಏನಾದರೂ ಮಧ್ಯೆ ಪ್ರವೇಶಮಾಡಿ ನೆಗೋಷಿಯೇಟ್ ಮಾಡಿದರೆ ಒಳ್ಳೆಯದು. ಇದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೇನೆ. ದಯಮಾಡಿ ಸರ್ಕಾರದವರು ಅವರ ಡಿಮಾಂಡ್‌ಗಳನ್ನು ಸಹಾನುಭೂತಿಯಿಂದ ವ್ಯವಹರಿಸಿ ಮುಷ್ಕರವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಸ್.ಎಂ. ಶಿರಾಳಕೊಪ್ಪ ಚಂದ್ರಶೇಖರ್.—ದಾವಣಗೆರೆ ಇಂಜನೀಯರಿಂಗ್ ಕಾಲೇಜ್ ವಿದ್ಯಾರ್ಥಿಗಳು ಕೂಡ ಮುಷ್ಕರ ಹೂಡಿದ್ದಾರೆ,

ಶ್ರೀ ಕೋಣಂದೂರುಲಿಂಗಪ್ಪ.— ಬೆಂಗಳೂರು ಯೂನಿವರ್ಸಿಟಿ ವಿದ್ಯಾರ್ಥಿಗಳು ಸಹ ಮುಷ್ಕರವನ್ನು ಪ್ರಾರಂಭಮಾಡಿದ್ದಾರೆ.